# ಕಲ್ಪನೆಯೇ ಅಭಿನಯಕ್ಕೆ ಬಂಡವಾಳ

## ಮಾನ್ಸಿ ಜೋಶಿ

ಝೀ ಕನ್ನಡದ 'ಆದಿಲಕ್ಷ್ಮಿ ಪುರಾಣ' ಅಮೃತಾ

■ ರಾಘವೇಂದ್ರ ಕೆ.



◆ **ಅಮೃತಾ ಪಾತ್ರವನ್ನು ನೀವು ಅನುಭವಿಸುವ ಪರಿ ಹೇಗಿದೆ?**

ಇದು ನನ್ನ ವ್ಯಕ್ತಿತ್ವಕ್ಕೆ ಹೋಲಿಕೆ ಆಗದಂತಹ ಪಾತ್ರ. ವಾಸ್ತವದಲ್ಲಿ ಮೃದುಸ್ವಭಾವದ ಹುಡುಗಿ. ಮುದ್ದು ಮುದ್ದಾಗಿ ಮಾತನಾಡುತ್ತಿರುತ್ತೇನೆ. ಆದರೆ, ಮೌನದ ಪಾತ್ರವೊಂದನ್ನು ನಿರ್ವಹಿಸುವಾಗ ನಟರಾದವರಿಗೆ ಆ ವೇದನೆ ಅರ್ಥವಾಗುತ್ತದೆ. ತನ್ನೆಲ್ಲ ತುಮುಲಗಳನ್ನು ಬಚ್ಚಿಟ್ಟುಕೊಂಡಿರಬೇಕು. ಮಾತಾಡದೆ ಕಣ್ಣಲ್ಲೇ ಭಾವನೆಗಳನ್ನು ಹೊರಹಾಕಬೇಕು. ಅಂತಹ ಪಾತ್ರ ಮಾಡಲು ಖುಷಿ ಆಗ್ತಿದೆ. ಸವಾಲು ಇದ್ದರೂ ಒಳ್ಳೆಯ ಅನುಭವವನ್ನು ಅದು ನೀಡುತ್ತಿದೆ.

◆ **ಅನುಷ್ಕಾ ಪಾತ್ರ ಪ್ರಸಿದ್ಧ ಆಗುತ್ತೆ ಎನ್ನುವ ನಿರೀಕ್ಷೆ ಇತ್ತಾ?**

'ಪಾರು' ಧಾರಾವಾಹಿಯ ಅನುಷ್ಕಾ ನೆಗೆಟಿವ್ ಗುಣದವಳು. ಅವಳು ಈ ಮಟ್ಟಿಗೆ ಜನಪ್ರಿಯ ಆಗುತ್ತಾಳೆ ಎನ್ನುವುದು ಗೊತ್ತಿರಲಿಲ್ಲ. ಅಲ್ಲಿ ಕೇಡು ಬಯಸುತ್ತಿದ್ದೆ. ವಾಸ್ತವದಲ್ಲಿ ಅಂತಹ ಮನಸ್ಸು ನನ್ನದಲ್ಲ. ಬಹುಶಃ ನಿಜ ಜೀವನದಲ್ಲಿ ತೋರಿಸಲು ಆಗದಿರುವುದು, ಅಲ್ಲಿ ಸಿಟ್ಟು–ಸೇಡು ತೋರಿಸಿದೆ. ನನ್ನ ಶಕ್ತಿ ಮತ್ತು ಸಾಮರ್ಥ್ಯವನ್ನು ಅದಕ್ಕೆ ಬಳಸಿದ್ದೇನೆ. ಅದು ಜನರಿಗೆ ಹೇಗೆ ಇಷ್ಟ ಆಯಿತೋ ಗೊತ್ತಿಲ್ಲ. ಈ ಮಟ್ಟಿಗೆ ಒಬ್ಬ ವ್ಯಕ್ತಿ ಕೇಡು ಬಯಸಲು ಸಾಧ್ಯವೇ ಎಂದುಕೊಂಡರೋ ಏನೋ? ನಾನಂತೂ ಸಿಕ್ಕಾಪಟ್ಟೆ ಬೈಸಿಕೊಂಡಿದ್ದೇನೆ. ಆದರೆ ಅದೇ ಕಲಾವಿದರ ಯಶಸ್ಸು ಎಂದೆನಿಸುತ್ತದೆ.

◆ **ನಿಮ್ಮ ಫೋಟೊಗಳು, ರೀಲ್ಸ್ ಸಾಮಾಜಿಕ ಮಾಧ್ಯಮದಲ್ಲಿ ಹೆಚ್ಚು ಹರಿದಾಡುತ್ತೆ ಏಕೆ?**

ಮದುವೆಯ ಫೋಟೊ ಇರಬಹುದು, ವಿವಾಹ ವಾರ್ಷಿಕೋತ್ಸವದ ಫೋಟೊಗಳು ಹಾಗೇ ಹಂಚಿಕೆಯಾಗಿವೆ. ರಿಯಾಲಿಟಿಗೆ ಆಧರಿಸಿಯೇ ರೀಲ್ಸ್ ಮಾಡುತ್ತೇನೆ. ಅರ್ಥ ಮಾಡಿಕೊಳ್ಳುವ ಹುಡುಗ ಸಿಕ್ಕಿರುವುದಕ್ಕೆ ಅದೃಷ್ಟವಂತೆ. ನಿಜ ಸಂಗತಿಗಳಿಗೆ ರೀಲ್ಸ್‌ನಲ್ಲಿ ಪ್ರತಿಕ್ರಿಯಿಸುತ್ತೇನೆ. ತಂಗಿಯ ಜೊತೆ ಕ್ರಿಯಾಶೀಲವಾಗಿ ಇರುತ್ತೇನೆ. ಎಂಜಾಯ್ ಮಾಡುವುದನ್ನೇ ಹಾಕುತ್ತೇನೆ. ಗೆಳತಿ ಮೋಕ್ಷಿ ಜೊತೆ ಕೂಡ ಮಾಡುತ್ತೇನೆ. ಕಂಟೆಂಟ್ ವೀಕ್ಷಕರು ತಮಗೆ ಹೋಲಿಕೆ ಮಾಡಿಕೊಳ್ಳಬಹುದು. ಹಾಗಾಗಿ ಹಂಚಿಕೊಳ್ಳುತ್ತಾರೆ.

◆ **ಇನ್‌ಸ್ಟಾ ಥೀಮ್ ಏನಿರುತ್ತದೆ?**

ಪ್ರವಾಸ ಮತ್ತು ನೈಜ ಘಟನೆಗಳಿಗೆ ಆದ್ಯತೆ ನೀಡಿರುತ್ತೇನೆ. ಬೇರೆ ಬೇರೆ ಸ್ಥಳವನ್ನು ಪರಿಚಯಿಸುತ್ತೇನೆ. ಜೀವನವನ್ನು ಅನುಭವಿಸುವ ಉತ್ಸಾಹ ಇಷ್ಟ ಆಗಬಹುದು. ವೀಕ್ಷಕರು ಶೂಟಿಂಗ್ ಸೆಟ್ಟಿಗೆ ಬಂದು ನೋಡಲು ಆಗುವುದಿಲ್ಲ. ಚಿತ್ರೀಕರಣ ತಾಣದ ರೀಲ್ಸ್ ಮಾಡಿದಾಗ ವೀಕ್ಷಕರಿಗೆ ಮಜಾ ಅನ್ನಿಸುತ್ತದೆ. ನಮ್ಮ ತಂಡದ ಜೊತೆ ಕೂಡ ರೀಲ್ಸ್ ಮಾಡುತ್ತೇನೆ. 'ಆದಿಲಕ್ಷ್ಮಿ ಪುರಾಣ' ತಂಡದ ನೃತ್ಯಗಳು, ಕ್ಯಾಮೆರಾ ಹಿಂದಿನ ಕಥನಗಳನ್ನು ತಿಳಿಯುವ ಕುತೂಹಲ ಇರುತ್ತದೆ. ಅದನ್ನು ರೀಲ್ಸ್ ಭಾಷೆಯಲ್ಲಿ ಬಿಟಿಎಸ್ ಎನ್ನುತ್ತಾರೆ, ಇದೆಲ್ಲ ಖುಷಿ ಅನ್ನಿಸುತ್ತದೆ.

◆ **ನಟನೆಯನ್ನು ಆಯ್ಕೆ ಮಾಡಿಕೊಂಡ ಸಂದರ್ಭ ಹೇಗಿತ್ತು?**

ಆಗ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ನಟನೆ ಗೊತ್ತಿರಲಿಲ್ಲ. ಸತ್ಯಜಿತ್ ಅವರು ಯೂಟ್ಯೂಬ್ ಸೀರೀಸ್‌ಗೆ ಆಹ್ವಾನಿಸಿದರು. ಒಂದು ಪ್ರಯತ್ನವನ್ನು ಮಾಡಿದೆ. ಆಗ ಚಿತ್ರೀಕರಣದ ಮೂಲತತ್ವ ಅರಿತುಕೊಳ್ಳಲು ಸಾಧ್ಯವಾಯಿತು. ನಟನೆಯನ್ನು ವೃತ್ತಿಯಾಗಿ ತೆಗೆದುಕೊಳ್ಳುವುದಾದರೆ ತರಬೇತಿ ಬೇಕಾಗುತ್ತೆ ಎಂದು ಸೂಚಿಸಿದರು. ಹಾಗಾಗಿ ನಟನೆ ತರಬೇತಿ ತೆಗೆದುಕೊಳ್ಳಲು ನಿರ್ಧರಿಸಿದೆ. ನಂತರ ಆಡಿಷನ್ ಕೊಡಲು ಶುರುಮಾಡಿದೆ. ಆಗ ದುಡಿಮೆ 50 ಸಾವಿರ ರೂಪಾಯಿ ಇತ್ತು. ಅದರಲ್ಲೇ ಫೀ, ಜಿಮ್ ಸೇರಿದೆ. ನಂತರ 10 ಸಾವಿರ ಉಳಿದಿತ್ತು. ಸುಮಾರು ಆಡಿಷನ್ ನಂತರ 'ಬಿಳಿ ಹೆಂಡ್ತಿ'ಗೆ ಮೊದಲ ಅವಕಾಶ ಸಿಕ್ಕಿತು. ನಂತರ 'ರಾಧಾ ರಮಣ'ದಲ್ಲಿ ಮಾಡಿದೆ. ಆಮೇಲೆ ನಿಯಮಿತವಾಗಿ ಒಂದಲ್ಲ ಒಂದು ಪಾತ್ರ ಸಿಕ್ಕಿದೆ. ಕನ್ನಡದ ಪ್ರಮುಖ ಐದು ವಾಹಿನಿಗಳಲ್ಲಿ ನಟಿಸಿದ್ದೇನೆ. ತಮಿಳು, ತೆಲುಗು, ಮಲಯಾಳಂ ಧಾರಾವಾಹಿಗಳಲ್ಲಿ ನಟಿಸಿದ್ದೇನೆ. 'ಬಿಳಿ ಹೆಂಡ್ತಿ'ಯಲ್ಲಿ ತುಂಬ ಸೈಕಲ್ ಹೊಡೀತಾ ಇದ್ದೆ. ಅಂದರೆ ರೀ ಟೇಕ್ ಹೆಚ್ಚು ತೆಗೆದುಕೊಳ್ಳುತ್ತಿದ್ದೆ. ಕಾರಿನಿಂದ ನಗುತ್ತ ಇಳಿಯುವುದು ಮೊದಲ ದೃಶ್ಯ. ಅದು ಕಷ್ಟ ಆಯಿತು. ಮೊದಲ ಪಾತ್ರವೇ ನೆಗೆಟಿವ್. ತಂಡದ ಸಹಕಾರದಿಂದ ನಿಧಾನಕ್ಕೆ ಅಭಿನಯ ರೂಢಿಸಿಕೊಂಡೆ. ನಟನೆಯನ್ನು ಹಿಂಜರಿಕೆಯಿಂದ ಮಾಡಬಾರದು ಎನ್ನುವುದು ಗೊತ್ತಾಯಿತು. ಸನ್ನಿವೇಶಕ್ಕೆ ಕಲ್ಪನೆ ವಿಸ್ತರಿಸಿಕೊಳ್ಳಬೇಕು. ■